**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂಖ್ಯೆ :ಉಕೃನಿ/ಕೃಭಾ/ಸುತ್ತೋಲೆ–11/2014–15.

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು–01
ದಿನಾಂಕಃ 21–02–2015.

**ಸುತ್ತೋಲೆ–11**

ವಿಷಯ: ಕೃಷಿ ಭಾಗ್ಯ ಯೋಜನೆಯಡಿ RTGS ಮುಖಾಂತರ ಸಹಾಯಧನ ಪಾವತಿಗೆ ಕ್ರಮಗಳ ಕುರಿತು.
ಉಲ್ಲೇಖ: ಕೃಷಿ ಭಾಗ್ಯ ಯೋಜನೆಯ ಸುತ್ತೋಲೆ–7

***

ಕೃಷಿ ಭಾಗ್ಯ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಫಲಾನುಭವಿ ವಿವರಗಳು, ಕಾರ್ಯಪ್ರಗತಿ, ಸಹಾಯಧನ ನೀಡಿಕೆ ಮಂಜೂರಾತಿ, ಮತ್ತು ಸಹಾಯಧನ ವರ್ಗಾವಣೆ ಈ ಎಲ್ಲ ಪ್ರಕ್ರಿಯೆಗಳನ್ನು ತಂತ್ರಾಂಶದ ಮುಖಾಂತರ ನಿರ್ವಹಿಸಲು ಉಲ್ಲೇಖದ ಸುತ್ತೋಲೆಯಲ್ಲಿ ಈಗಾಗಲೇ ಸೂಚನೆ ನೀಡಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ಕೃಷಿ ಹೊಂಡ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ಪ್ರಗತಿಯಲ್ಲಿರುತ್ತದೆ. ಕೃಷಿ ಹೊಂಡ ನಿರ್ಮಾಣದಲ್ಲಿ ರೈತರು ಸ್ವಂತ ಬಂಡವಾಳ ಹೂಡಬೇಕಿರುವುದರಿಂದ ಸಹಾಯಧನದ ಮೊತ್ತ ಶೀಘ್ರವಾಗಿ ಪಾವತಿಸಲು ಬೇಡಿಕೆ ಇರುತ್ತದೆ. ತಂತ್ರಾಂಶ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ಫೆಬ್ರುವರಿ 2015 ರ ಅಂತ್ಯಕ್ಕೆ ಪೂರ್ಣವಾಗುವ ಸಂಭವವಿರುತ್ತದೆ. ಆದ ಕಾರಣ ತಂತ್ರಾಂಶ ಸಿದ್ಧವಾಗುವವರೆಗೆ ಅಂದರೆ ಫೆಬ್ರುವರಿ 2015 ರ ಅಂತ್ಯದ ವರೆಗೆ ಜಂಟಿ ಕೃಷಿ ನಿರ್ದೇಶಕರು ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ಆದೇಶ ನೀಡಿ RTGS ಮುಖಾಂತರ ನಿಯಮಾನುಸಾರ ರೈತರ ಖಾತೆಗೆ ಸಹಾಯಧನ ಪಾವತಿಗೆ ಕ್ರಮ ಕೈಗೊಳ್ಳಲು ಈ ಮೂಲಕ ಸೂಚನೆ ನೀಡಲಾಗಿದೆ ಹಾಗೂ ಪಾವತಿ ವಿವರಗಳನ್ನು ಕೇಂದ್ರ ಕಛೇರಿಗೆ ನೀಡಲು ತಿಳಿಸಿದೆ.

**(ಕಂಡಿಕೆ 6 ರಲ್ಲಿ ಕೃಷಿ ಆಯುಕ್ತರು ಅನುಮೋದಿಸಿರುತ್ತಾರೆ)**

ಕೃಷಿ ಆಯುಕ್ತರ ಪರವಾಗಿ

**ಇವರಿಗೆ,**
ಕೃಷಿ ಭಾಗ್ಯ ಯೋಜನೆ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ